ಏ) ವಾಹನಗಳ ಓಡಾಟದ ಸಂಖ್ಯೆಯ ವಿವರಗಳು ಲಭ್ಯವಿರುವುದಿಲ್ಲ.

ಐ) ಮೆ: ರಾಜಶೇಖರ್ ಸ್ಟೋನ್ ಕ್ರಷರ್ ಸ್ವಂತ ಕಲ್ಲು ಗಣಿಯಿದ್ದು ಮೆಷಿನ್‌ಗಳಿಗೆ ಬೇಕಾಗುವ ಕಲ್ಲುಗಳನ್ನು ಗಣಿಗಾರಿಕೆ ನಡೆಸಿ ಪಡೆದುಕೊಳ್ಳುತ್ತಾರೆ. ಇನ್ನುಳಿದ 4 ಜಲ್ಲಿ ಕ್ರಷರ್‌ಗಳು ಜಿಲ್ಲೆ/ ತಾಲ್ಲೂಕಿನ ಇತರೆ ಭಾಗಗಳಿಂದ ತರಿಸಿಕೊಳ್ಳುತ್ತಿರುತ್ತಾರೆ.

ಒ) ಇಂತಹ ಅನುಮತಿ ನೀಡುವುದು ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಓ) ಉದ್ಭವಿಸುವುದಿಲ್ಲ.

ಔ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

11(671) ಶ್ರೀ ಅಂಗಾರ ಎಸ್.(ಸುಳ್ಯ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿನ ಗ್ರಾಮೀಣ ಪ್ರದೇಶಗಳ ವಿದ್ಯುತ್‌ಕರಣಕ್ಕೆ ಹ್ಯಾಮ್ಲಾಟ್ ಯೋಜನೆಯಡಿಯಲ್ಲಿ ಕಾಮಗಾರಿ ಮಂಜೂರಾಗಿದ್ದು ಅರಣ್ಯ ಇಲಾಕೆಯವರ ಹಸ್ತಕ್ಷೇಪದಿಂದ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದರೆ. ವಿದ್ಯುತ್‌ಕರಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು. ಗಮನಕ್ಕೆ ಬಂದಿದೆ.

ಆ) ಅರಣ್ಯ ಇಲಾಖೆಯವರ ಹಸ್ತಕ್ಷೇಪದಿಂದ ಹ್ಯಾಮ್ಲೆಟ್ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳು ಪೂರ್ಣವಾಗದೆ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಸಂಬಂಧಿಸಿದವರೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ 57 ಹ್ಯಾಮ್ಲೆಟ್‌ಗಳ ವಿದ್ಯುದ್ದೀಕರಣವನ್ನು ಮೆ: ಮೈಸೂರು ಲ್ಯಾಂಪ್ಸ್ ಲಿ. ಬೆಂಗಳೂರು ಇವರಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ 2002 ರಲ್ಲಿ ವಹಿಸಲಾಗಿತ್ತು. 57 ಹ್ಯಾಮ್ಲೆಟ್‌ಗಳ ಪೈಕಿ 8 ಹ್ಯಾಮ್ಲೆಟ್‌ಗಳ ಕೆಲಸ ಪೂರ್ಣಗೊಂಡಿದ್ದು ವಿದ್ಯುದ್ದೀಕರಣಗೊಂಡಿರುತ್ತದೆ. ಇನ್ನೂ 7 ಹ್ಯಾಮ್ಲೆಟ್‌ಗಳ ವಿದ್ಯುದ್ದೀಕರಣ ಕೆಲಸ ನಡೆಯುತ್ತಿದ್ದಾಗ ಅರಣ್ಯ ಇಲಾಖೆಯವರಿಂದ ತಕರಾರು ಬಂದು ಕೆಲಸವು ಸ್ಥಗಿತಗೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ಇದೇ ಕಾರಣಕ್ಕಾಗಿ ಮತ್ತೆ 14 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಲಿಲ್ಲ. ಇನ್ನುಳಿದ 18 ಕಾಮಗಾರಿಗಳಿಗೆ ಮೆ: ಮೈಸೂರು ಲ್ಯಾಂಪ್ಸ್ ಲಿ. ರವರಿಗೆ ನೋಟೀಸ್ ನೀಡಿದ್ದಾಗ್ಯೂ ಕೆಲಸ ಪ್ರಾರಂಭಿಸಲಿಲ್ಲ. ಹೀಗಾಗಿ ಸದರಿಯವರ ಗುತ್ತಿಗೆಯನ್ನು ರದ್ದುಪಡಿಸುವ ಸ್ಥಿತಿಗೆ ಬಂದು ಗುತ್ತಿಗೆಯನ್ನು ಡಿಸೆಂಬರ್–2004ರಲ್ಲಿ ರದ್ದುಪಡಿಸಲಾಗಿರುತ್ತದೆ. ಹೀಗಾಗಿ ಸದರಿ ಹ್ಯಾಮ್ಲೆಟ್‌ಗಳ ವಿದ್ಯುದ್ದೀಕರಣವನ್ನು ಇತರೆ ವಿಧಾನದಿಂದ ನಿರ್ವಹಿಸಲು ಕ್ರಮ ಜರುಗಿಸಬೇಕಾಗಿರುತ್ತದೆ.

12(673) ಶ್ರೀ ಅಂಗಾರ ಎಸ್ (ಸುಳ್ಯ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುಳ್ಯ ತಾಲ್ಲೂಕಿನ ಜಾಲ್ಸೂರು–ಸುಬ್ರಮಣ್ಯ ರಸ್ತೆಯಲ್ಲಿ ಸೋಣಂಗೇರಿ ಮತ್ತು ಕೆಣ್ವಕುಳಿ ಎಂಬಲ್ಲಿನ ಎರಡು ಸೇತುವೆಗಳು ಮಳೆಗಾಲದಲ್ಲಿ ನೆರೆ ನೀರು ಬಂದು ಸೇತುವೆ ಮೇಲೆ ಹರಿಯುತ್ತಿರುವುದರಿಂದ ವಾಹನ ಸಂಚಾರ, ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: